ಒಂದೇ ಕೆಲಸವನ್ನು ಬೇರೆ ಬೇರೆ ಶೀರ್ಷಿಕೆಗಳಲ್ಲಿ ತೆಗೆದುಕೊಳ್ಳಬೇಕಾಗುವ ಪ್ರಸಂಗ ಒಂದೊಂದು ಸಲ ಬರುತ್ತದೆ. ಏಕೆಂದರೆ ಮೊದಲು ಒಂದು ಶೀರ್ಷಿಕೆಯಲ್ಲಿ ತೆಗೆದುಕೊಂಡ ಕಾಮಗಾರಿಯು ನಿರ್ದಿಷ್ಟ ಪಡಿಸಿದ ಅಂದಾಜು ಮೊತ್ತಕ್ಕಿಂತ ಹೆಚ್ಚಿಗೆ ಆಗುವ ಸಂಭವ ಬಂದಲ್ಲಿ ಆ ಹೆಚ್ಚಿನ ಕಾಮಗಾರಿಗಾಗಿ ಇನ್ನೊಂದು ಲಭ್ಯವಿರುವ ಅನುದಾನ ಶೀರ್ಷಿಕೆಯಲ್ಲಿ ತೆಗೆದುಕೊಂಡು ಅನುಮತಿ ಪಡೆದು ಕಾಮಗಾರಿಯನ್ನು ಪೂರ್ಣ ಗೊಳಿಸಲಾಗುವುದು. ಅನುಮತಿ ಪಡೆಯದೇ ಬೇರೆ ಬೇರೆ ಶೀರ್ಷಿಕೆಯಲ್ಲಿ ಒಂದೇ ಕೆಲಸವನ್ನು ತೆಗೆದುಕೊಳ್ಳಲಾಗುವುದಿಲ್ಲ.

ಕೊಪ್ಪಳ ಜಿಲ್ಲಾ ಪಂಚಾಯತ್ ಕುಷ್ಟಗಿ ತಾಲ್ಲೂಕು;

ಒಂದೇ ಕೆಲಸಕ್ಕೆ ಬೇರೆ ಬೇರೆ ಶೀರ್ಷಿಕೆಯಡಿಯಲ್ಲಿ ಹಣ ವ್ಯಯ ಮಾಡಿರುವುದಿಲ್ಲ.

ಈ) ರಾಯಚೂರು ಜಿಲ್ಲಾ ಪಂಚಾಯತ್ ಲಿಂಗಸುಗೂರು ತಾಲ್ಲೂಕು: ಅಂಥ ಯಾವುದೇ ಪ್ರಸಂಗ ಬಂದಿರುವುದಿಲ್ಲ. ಕೊಪ್ಪಳ ಜಿಲ್ಲಾ ಪಂಚಾಯತ್ ಕುಷ್ಟಗಿ ತಾಲ್ಲೂಕು; ಅಂಥ ಯಾವುದೇ ಪ್ರಸಂಗ ಬಂದಿರುವುದಿಲ್ಲ.

ಉ) ಕೊಪ್ಪಳ ಜಿಲ್ಲಾ ಪಂಚಾಯತ್ ಕುಷ್ಟಗಿ ತಾಲ್ಲೂಕು; 5 ವರ್ಷಕ್ಕಿಂತ ಹೆಚ್ಚಿಗೆ ಸೇವೆ ಸಲ್ಲಿಸಿದ ವಿವಿಧ ವೃಂದಗಳಲ್ಲಿ 29 ಸಿಬ್ಬಂದಿಗಳು ಇರುವರು. ರಾಯಚೂರು ಜಿಲ್ಲಾ ಪಂಚಾಯತ್ ಲಿಂಗಸುಗೂರು ತಾಲ್ಲೂಕು;

ಅಧಿಕಾರಿಗಳು ಯಾರೂ 5 ವರ್ಷಗಳಿಗಿಂತ ಹೆಚ್ಚು ಸೇವೆ ಸಲ್ಲಿಸಿದವರು ಇಲ್ಲ. ಇತರ ಅಂದರೆ ಗ್ರಾಮ ಪಂಚಾಯತ್ ಕಾರ್ಯದರ್ಶಿಗಳು, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆಸಹಾಯಕರು, ವಾಹನ ಚಾಲಕ, ಗ್ರೂಪ್ ಡಿ ಸೇರಿದ ಒಟ್ಟು 28 ನೌಕರರು 5 ವರ್ಷಗಳಿಗಿಂತ ಹೆಚ್ಚಿನ ಸೇವೆಯನ್ನು ತಾಲೂಕಾ ಪಂಚಾಯತ್ ಲಿಂಗಸುಗೂರಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಊ) ಕೊಪ್ಪಳ ಜಿಲ್ಲಾ ಪಂಚಾಯತ್ ಕುಷ್ಟಗಿ ತಾಲ್ಲೂಕು; ಆಡಳಿತಾತ್ಮಕ ದೃಷ್ಟಿಯಲ್ಲಿ ಮುಂದುವರೆದಿದ್ದಾರೆ. ರಾಯಚೂರು ಜಿಲ್ಲಾ ಪಂಚಾಯತ್ ಲಿಂಗಸುಗೂರು ತಾಲ್ಲೂಕು; ಅವರುಗಳು ಸ್ವಾಭಾವಿಕವಾಗಿ ಅಲ್ಲಿಯೇ ಮುಂದುವರೆದಿದ್ದಾರೆ, ವಿಶೇಷ ಕಾರಣಗಳು ಇರುವುದಿಲ್ಲ;

571 ಶ್ರೀ ಬಸವಣ್ಣೆಪ್ಪ ಜಿ. (ಹೊಳೆಹೊನ್ನೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2001 ರಿಂದ 2004ರ ವರೆಗಿನ ಕೂಲಿಗಾಗಿ ಕಾಳು ಯೋಜನೆಯಡಿ ಒಟ್ಟು ನೀಡಿರುವ ಆಹಾರಧಾನ್ಯಗಳ ಪ್ರಮಾಣವೆಷ್ಟು; (ವರ್ಷವಾರು, ಜಿಲ್ಲಾವಾರು); ಅಂಕಿ ಅಂಶಗಳನ್ನು ಸಲ್ಲಿಸುವುದು;

ಆ) ಕೂಲಿಗಾಗಿ ಕಾಳು ಯೋಜನೆಯಡಿ 2001–04 ರಲ್ಲಿ ಫಲಾನುಭವಿಗಳ ಒಟ್ಟು ಸಂಖ್ಯೆ; (ಜಿಲ್ಲಾವಾರು, ವರ್ಷವಾರು ಅಂಕಿ ಅಂಶಗಳನ್ನು ಸಲ್ಲಿಸುವುದು);

ಇ) ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ಕೂಲಿಯಾಳುಗಳನ್ನು ವರ್ಷಪೂರ್ತಿ ನೇಮಿಸಿಕೊಳ್ಳಲಾಗುವುದೇ?

ಈ) ಹಾಗಿದ್ದರೆ, ಕೂಲಿಗಾಗಿ ಕಾಳು ಯೋಜನೆಯಡಿ ನೇಮಿಸಿಕೊಂಡ ಕೂಲಿಕಾರರ ಸಂಖ್ಯೆ ಎಷ್ಟು ;

ಉ) ಕೆಲವು ಯಂತ್ರಗಳನ್ನು ಉಪಯೋಗಿಸಿರುವುದು ನಿಜವೇ ;

ಊ) ನಿಜವಾಗಿದ್ದರೆ, ಇಂತಹ ಯಂತ್ರದಿಂದಾದ ಕಾಮಗಾರಿಗಳ ವಿವರ;

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ) ಅನುಬಂಧ –1 ರಲ್ಲಿ ಲಗತ್ತಿಸಿದೆ.

ಆ) ಈ ಯೋಜನೆಯು ಸೆಪ್ಟಂಬರ್ 2002 ರಿಂದ ಜಾರಿಗೆ ಬಂದಿದೆ. ಆಹಾರಧಾನ್ಯಗಳನ್ನು ಉಪಯೋಗಿಸಿ ಮಾನವ ದಿನಗಳನ್ನು ಸೃಜಿಸಿರುವ ಬಗ್ಗೆ ಈ ವರ್ಷಕ್ಕೆ ಮಾಹಿತಿ ಈ ಕೆಳಗಿನಂತೆ ನೀಡಿದೆ.

2002–03	2003–04	2004–05
6834931	203493779	260216666
		(31.12.04 ರವರೆಗೆ)

ಜಿಲ್ಲಾವಾರು ಮಾಹಿತಿ ಅನುಬಂಧ –2 ರಲ್ಲಿ ಗತ್ತಿಸಿದೆ.

ಇ) ಇಲ್ಲ

ಈ) ಕಳೆದ 3 ವರ್ಷಗಳಿಂದ ಈ ಕೆಳಗಿನಂತೆ ಮಾನವ ದಿನಗಳನ್ನು ಸೃಜಿಸಲಾಗಿದೆ.

ವರ್ಷ	ಮಾನವದಿನಗಳ ಸೃಷ್ಟಿ
1. 2001–02	
2. 2002–03	683493136
3. 2003–04	

ಉ) ಇಲ್ಲ.

ಊ) ಉದ್ಭವಿಸುವುದಿಲ್ಲ.

1109 ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರ ವ್ಯಾಪ್ತಿಯಲ್ಲಿರುವ ಸ್ತ್ರೀಶಕ್ತಿ ಹಾಗೂ ಇತರ ಮಹಿಳಾ ಸಂಘಟನೆಗಳೆಷ್ಟು;

ಆ) ಈ ಮಹಿಳಾ ಸಂಘಟನೆಗಳ ಕಾರ್ಯ ಚಟುವಟಿಕೆಗಳಿಗಾಗಿ ಸರ್ಕಾರದ ಕಾರ್ಯ ಕ್ರಮಗಳೇನು;

ಇ) ಈ ಸಂಘಟನೆಗಳಿಗೆ ರಿಯಾಯಿತಿ ದರದಲ್ಲಿ ನಿವೇಶನ ಒದಗಿಸಲಾಗುವುದೇ;

ಶ್ರೀಮತಿ ಭಾಗೀರತಿ ಮರುಳಸಿದ್ದನಗೌಡ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) –

ಅ) ಸ್ತ್ರೀಶಕ್ತಿ ಗುಂಪುಗಳು– 170 (ಡಿಸೆಂಬರ್ 2004ರ ಅಂತ್ಯಕ್ಕೆ) ಮಹಿಳಾ ಸಂಘಟನೆಗಳು–2000.

ಆ) ಸರ್ಕಾರ ವತಿಯಿಂದ ನಗರ ಸ್ತ್ರೀಶಕ್ತಿ ಗುಂಪುಗಳಿಗೆ ಕಿಟ್ ಮೆಟೀರಿಯಲ್ಸ್, ತರಬೇತಿ, ಸುತ್ತುನಿಧಿ ಹಾಗೂ ಹೆಚ್ಚು ಉಳಿತಾಯ ಮಾಡಿದ ಗುಂಪುಗಳಿಗೆ ಪ್ರೋತ್ಸಾಹ ಧನ ನೀಡುವ ಕಾರ್ಯಕ್ರಮಗಳಿವೆ.

ಇ) ಯೋಜನೆಯಡಿ ನಿವೇಶನ ಹಂಚಲು ಅವಕಾಶವಿರುವುದಿಲ್ಲ.

2813 (3122) ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಬೆಳ್ಳಾವಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕು ಸತತವಾಗಿ ಬರಗಾಲಕ್ಕೆ ಒಳಗಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ತಾಲ್ಲೂಕನ್ನು 2004–05ನೇ ಸಾಲಿಗೆ ಬರಗಾಲಪೀಡಿತ ತಾಲ್ಲೂಕೆಂದು ಘೋಷಣೆ ಮಾಡಲಾಗಿದೆಯೇ;

ಇ) ಈ ತಾಲ್ಲೂಕಿನ ಬರಪರಿಸ್ಥಿತಿ ನಿವಾರಣೆಗಾಗಿ ಸರ್ಕಾರವು ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ; (ವಿವರ ನೀಡುವುದು)?

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು)

ಅ) ಇಲ್ಲ.